

ಇದಕ್ಕೆ ಪರಿಹಾರವನ್ನು ಶ್ರೀಮಾತೆ ಶಾರದಾದೇವಿಯವರ ವ್ಯಕ್ತಿತ್ವದ ಅಧ್ಯಯನದಲ್ಲಿ ನಾವು ಕಾಣಬಹುದು. ಶ್ರೀಮಾತೆಯವರು ತಮ್ಮ ಬಾಳಿನಲ್ಲಿ ಪ್ರಕಟಪಡಿಸುವ ಅಪಾರ ಆತ್ಮವಿಶ್ವಾಸ, ಆ ಕಾಲದ ಹೆಣ್ಣುಮಕ್ಕಳಿಗೆ ಹೋಲಿಸಿದಲ್ಲಿ ಅಸಾಧಾರಣವಾದುದು. ಶ್ರೀರಾಮಕೃಷ್ಣರಂಥ ದೈವೋನ್ನತ್ತ ವ್ಯಕ್ತಿಯ ಜೊತೆಗೆ ಬಾಳಿ, ಅವರ ಆದರ್ಶವನ್ನು ತಮ್ಮ ಬಾಳಿನ ಧ್ಯೇಯವನ್ನಾಗಿಯೂ ಸ್ವೀಕರಿಸುವ ಅದಮ್ಯ ವಿಶ್ವಾಸವನ್ನು ಅವರು ಚಿಕ್ಕ ವಯಸ್ಸಿನಲ್ಲಿಯೇ ವ್ಯಕ್ತಪಡಿಸಿದ್ದು ಸಾಧಾರಣ ಸಂಗತಿಯೇನಲ್ಲ. ಮುಂದೆ ಪತಿಸೇವೆಯಂತಹ ಅತ್ಯಂತ ಕಠಿಣ ಕಾರ್ಯವನ್ನು ಲೀಲಾಜಾಲವಾಗಿ ನಡೆಸಿದ್ದು, ಈ ಆತ್ಮವಿಶ್ವಾಸದ ಅಪೂರ್ವ ಅಭಿವ್ಯಕ್ತಿಯೆಂದೇ ಹೇಳಬೇಕು. ಪತಿಯ ದೇಹತ್ಯಾಗದ ನಂತರವಂತೂ, ಆ ಅದಮ್ಯ ಆಂತರಿಕ ವಿಶ್ವಾಸವೇ ಬಾಹ್ಯದಲ್ಲಿ ಅವರನ್ನು ಜಗದ್ಗುರುವನ್ನಾಗಿ ರೂಪಿಸಿತು, ಸಹಸ್ರಾರು ನೊಂದ ಜೀವಿಗಳ ಬಾಳಿಗೆ ನಂದಾದೀಪವನ್ನಾಗಿ ಪರಿವರ್ತಿಸಿತು.

### ಆತ್ಮವಿಕಾಸ

ಆತ್ಮಸಂಯಮದಿಂದ ಆತ್ಮವಿಶ್ವಾಸ ಮೂಡುವುದು. ಈ ಬಗೆಯ ದೃಢ ಮತ್ತು ದೂರಗಾಮಿ ಆತ್ಮವಿಶ್ವಾಸದಿಂದ ವ್ಯಕ್ತಿಯೊಬ್ಬನು ತನ್ನ ಆತ್ಮವಿಕಾಸಕ್ಕಾಗಿ ಶ್ರಮಿಸುವನು. ಆಧುನಿಕ ಸ್ತ್ರೀಸಮಾನತಾವಾದಿಗಳ ಅಭಿಪ್ರಾಯದಂತೆ, ಭೌತಿಕ ಸ್ತರದಲ್ಲಿ ಸಾಧನೆಯನ್ನು ಮಾಡುವ ಸಾಮರ್ಥ್ಯವನ್ನು ಸಾಧಿಸುವುದೇ ಆತ್ಮವಿಕಾಸ. ಆದರೆ ಭಾರತೀಯ ಸಂಸ್ಕೃತಿಯು ಮಾತೃತ್ವದ ಆದರ್ಶವನ್ನು ಮಹಿಳೆಯ ಮುಂದೆ ಇಡುತ್ತದೆ. ಪರಿಪೂರ್ಣ ಮಾತೃತ್ವದ ಪ್ರಕಟಣೆಯೇ ಮಹಿಳೆಯ ಮಹೋನ್ನತ ಗುರಿಯೆಂದು ಪ್ರತಿಪಾದಿಸುತ್ತದೆ. ಪುರುಷರು ಮಾಡಬಲ್ಲ ಕೆಲಸಗಳನ್ನು, ತಾನು ಮಾಡುವ ಸಾಮರ್ಥ್ಯವನ್ನು ಬೆಳೆಸಿಕೊಂಡು, ಪುರುಷರಿಗೆ ಸಮಾನವಾಗಿ ಬದುಕುವುದು ಮಾತ್ರವೇ ಆಧುನಿಕ ಸ್ತ್ರೀಯ ಧ್ಯೇಯೋದ್ದೇಶವಾಗಿಬಿಟ್ಟಿದೆ. ಇದೇ ಸ್ತ್ರೀಸ್ವಾತಂತ್ರ್ಯವೆಂಬ ಭ್ರಮೆಯಲ್ಲಿ ಸ್ತ್ರೀಸಮಾನತಾವಾದಿಗಳು ಇದ್ದಾರೆ. ಆದರೆ ಭಾರತೀಯ ಸಭ್ಯತೆಯು ಪುರುಷನು ಸಾಧಿಸಬಲ್ಲ ಆದರ್ಶಕ್ಕಿಂತಲೂ ಅದೆಷ್ಟೋ ಉನ್ನತವೂ, ಉದಾತ್ತವೂ ಆದ ತಾಯ್ತನದ ಧ್ಯೇಯವನ್ನು ಮಹಿಳೆ ಸಾಧಿಸಬಲ್ಲಳು ಎಂದು ಪ್ರತಿಪಾದಿಸುತ್ತದೆ. ಹೀಗಾಗಿ ಸ್ತ್ರೀಸಮಾನತೆಯ ಭಾರತೀಯ ಕಲ್ಪನೆಯು ಪಾಶ್ಚಾತ್ಯ ಕಲ್ಪನೆಗಿಂತಲೂ ಶ್ರೇಷ್ಠ ಮಟ್ಟದ್ದಾಗಿದೆ. ಇಲ್ಲಿ ಆದರ್ಶತಾಯಿಯಾಗುವುದೇ, ಒಬ್ಬ ಹೆಣ್ಣುಮಗಳು ತನ್ನ ಜೀವನದಲ್ಲಿ ಕಂಡುಕೊಳ್ಳಬಹುದಾದ ಸಾರ್ಥಕತೆ. ಅದಕ್ಕಾಗಿ ಶ್ರಮಿಸುತ್ತ, ತನ್ನ ಮಾನಸಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಸಾಮರ್ಥ್ಯವನ್ನು ಜಾಗೃತಗೊಳಿಸುವುದೇ ಆತ್ಮವಿಕಾಸ. ಇಲ್ಲಿ ತಾಯ್ತನವೆಂದರೆ ಕೇವಲ ಮಕ್ಕಳನ್ನು ಪಡೆಯುವುದಲ್ಲ. ನೈಜ ಮಾತೃತ್ವವೆಂಬುದು ಪರಿಪೂರ್ಣ ನಿಸ್ವಾರ್ಥತೆ, ಪರಿಶುದ್ಧ ವಾತ್ಸಲ್ಯಗಳು ಘನೀಭೂತವಾಗಿರುವ ಆದರ್ಶವ್ಯಕ್ತಿತ್ವ. ಇದನ್ನು ಮಹಿಳೆಯರು ಮಾತ್ರವೇ ತಮ್ಮ ಜೀವನದಲ್ಲಿ ಅಭಿವ್ಯಕ್ತಗೊಳಿಸಬಲ್ಲರು. ಹೀಗಾಗಿ ಅವರು ನೈತಿಕ ಹಾಗೂ ಆಧ್ಯಾತ್ಮಿಕ ಆಯಾಮಗಳಲ್ಲಿ ಪುರುಷರಿಗಿಂತಲೂ ಅತಿ ಉನ್ನತ ಸ್ಥಾನವನ್ನು ತಮ್ಮದಾಗಿಸಿಕೊಳ್ಳಬಲ್ಲರು.



ಶ್ರೀಮಾತೆಯವರಲ್ಲಿ ಈ ಬಗೆಯ ಆತ್ಮವಿಕಾಸವು ಪೂರ್ಣರೂಪದಲ್ಲಿ ಪ್ರಕಟವಾಗಿರುವುದನ್ನು ಕಾಣುತ್ತೇವೆ. ಅವರು ದೈಹಿಕ ದೃಷ್ಟಿಯಲ್ಲಿ ಒಬ್ಬ ತಾಯಿಯಾಗಲೇ ಇಲ್ಲ. ಅದಕ್ಕೆ ಬದಲಾಗಿ ತಾಯ್ತನದ ಆದರ್ಶವನ್ನು ಉದಾತ್ತಗೊಳಿಸಿದರು. ಮಾನಸಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ನೆಲೆಗಳಲ್ಲಿ ತಮ್ಮ ವಾತ್ಸಲ್ಯದ ಧಾರೆಯನ್ನು ಹರಿಸಿ, ಜಗತ್ತಿನ ಎಲ್ಲ ಜನರೂ ತಮ್ಮ ಮಕ್ಕಳೆಂದು ಭಾವಿಸಿದರು. ಸಾಧಾರಣ ಸಾಂತ್ವನದಿಂದ ಹಿಡಿದು, ಭಗವದ್ದರ್ಶನವನ್ನು ದೊರಕಿಸಿಕೊಡುವವರೆಗೆ, ತಮ್ಮಡಿಯಲ್ಲಿ ಆಶ್ರಯಪಡೆದ ಎಲ್ಲ ತಪ್ತಜೀವಿಗಳಿಗೂ ದಿವ್ಯತೆಯ ಶೀತಲ ಸಂಸ್ಪರ್ಶ ಮಾಡಿಸಿದರು. ತಮ್ಮ ಕುಟುಂಬವನ್ನು ಇಡೀ ವಿಶ್ವದ ಪರಿಧಿಗೆ ವಿಸ್ತರಿಸಿಕೊಂಡು, ತಮ್ಮನ್ನು ನೋಡಲು ಬರುತ್ತಿದ್ದ ಎಲ್ಲರ ಸೇವೆಯ ಭಾರವನ್ನು ವಹಿಸಿಕೊಂಡರು. ಭುವಿಯಲ್ಲಿ ಹಳ್ಳಿಯ ಹೆಂಗಸಿನ ಮಾರುವೇಷವನ್ನು ಧರಿಸಿರುವ ಈ ಶ್ರೀಮಾತೆಯೇ, ವಿಶ್ವಗರ್ಭಿಣಿಯಾದ ಜಗನ್ಮಾತೆಯೆಂಬ ಪರಮವಿಶ್ವಾಸವನ್ನು ಶ್ರದ್ಧಾಳುಗಳಲ್ಲಿ ಮೂಡಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ, ನವಯುಗಾಚಾರ್ಯರಾದ ಶ್ರೀರಾಮಕೃಷ್ಣರೇ ಅವರ ತನುವಿನಲ್ಲಿ ಜಗದ್ಧಾರಿಣಿಯನ್ನು ಆವಾಹಿಸಿ ಪೂಜಿಸಿದರು. ಒಬ್ಬ ಮಹಿಳೆ ಇದಕ್ಕಿಂತ ಹೆಚ್ಚಿನ ಸಮಾನತೆಯನ್ನು, ಸ್ವಾತಂತ್ರ್ಯವನ್ನು ಆಶಿಸಲು, ಪಡೆದುಕೊಳ್ಳಲು ಸಾಧ್ಯವೇ? ಶ್ರೀಮಾತೆ ಜಗತ್ತಿನ ಎಲ್ಲ ಸ್ತ್ರೀಯರಿಗೆ ಕೊಡುವ ಕರೆ ಇದು: "ಕೇವಲ ಪುರುಷರಿಗೆ ಸಮಾನರಾಗಿ ಬದುಕಲು ಆಶಿಸಬೇಡಿ. ಅವರಿಗಿಂತಲೂ ಮೀರಿದ ಉನ್ನತ ಆದರ್ಶವನ್ನು ನೀವು ನಿಮ್ಮ ಬದುಕಿನಲ್ಲಿ ಪ್ರಕಟಿಸಬಲ್ಲಿರಿ. ಅದಕ್ಕಾಗಿ ಪ್ರಯತ್ನಿಸಿ" ಎಂದು. ನಮ್ಮ ಆಧುನಿಕ ಮಾತೆಯರು, ಜಗನ್ಮಾತೆಯ ಈ ಕರೆಗೆ ಓಗೊಡುವರೇನು? •




ಶ್ರೀಮಾತಾ ಸ್ಮೃತಿಸೌರಭ

# ಶ್ರೀಮಾತೆ ಮತ್ತು ಆಧುನಿಕ ಮಹಿಳೆ

ಪ್ರವ್ರಾಜಿಕಾ ಅಮಲಪ್ರಾಣಾ

## ಪ್ರಾಚೀನ ನಾರೀಮಣಿಗಳು

**ಪು**ಣ್ಯಭೂಮಿ ಭಾರತವು ಪ್ರಾಚೀನ ಕಾಲದಿಂದಲೂ ಶ್ರೇಷ್ಠ ಮತ್ತು ಮಹಿಮಾನ್ವಿತರಾದ ಸ್ತ್ರೀಯರ ದೇಶವೆಂದು ಸುಪ್ರಸಿದ್ಧವಾಗಿದೆ. ಹಿಂದೂ ಸಂಸ್ಕೃತಿಯ ತಳಹದಿಯಾದ ವೈದಿಕಯುಗದಲ್ಲಿ ನಾರಿಯರಿಗೆ ಅತ್ಯಂತ ಗೌರವದ ಸ್ಥಾನವಿತ್ತು. ಆದ್ದರಿಂದಲೇ ಇತಿಹಾಸಕಾರರು ವೈದಿಕ ಯುಗವನ್ನು ಭಾರತದ ಮಹಿಳೆಯರ 'ಸುವರ್ಣಯುಗ' ಎಂದು ಕರೆದಿದ್ದಾರೆ. ಆ ಯುಗದಲ್ಲಿ ಬಾಲಕರಂತೆ ಬಾಲಕಿಯರಿಗೂ ಉಪನಯನ ಸಂಸ್ಕಾರ ರೂಢಿಯಲ್ಲಿತ್ತು. ಉಪನಯನದ ನಂತರ ಅವರು ವೇದಾಧ್ಯಯನವನ್ನು ಮಾಡುತ್ತಿದ್ದರು. ವಿದ್ಯಾಭ್ಯಾಸ ಸಂಪೂರ್ಣವಾದ ಮೇಲೆಯೇ ವಿವಾಹವಾಗುತ್ತಿತ್ತು. ಹೆಣ್ಣುಮಕ್ಕಳು ಇಚ್ಛೆಪಟ್ಟರೆ ವಿವಾಹವಾಗದೆ ಆಜನ್ಮಬ್ರಹ್ಮಚಾರಿಣಿಯರಾಗಿ ಆಧ್ಯಾತ್ಮಿಕ ಸಾಧನೆಯಲ್ಲಿಯೇ ಜೀವನವನ್ನು ಕಳೆಯುವ ಸ್ವಾತಂತ್ರ್ಯವೂ ಅವರಿಗಿತ್ತು. ಅಂಥವರಿಗೆ 'ಬ್ರಹ್ಮವಾದಿನಿ'ಯರೆಂದೂ, ವಿವಾಹಿತರಿಗೆ 'ಸದ್ಯೋದ್ವಾಹ'ರೆಂದೂ ಕರೆಯಲಾಗುತ್ತಿತ್ತು. ಮಂತ್ರದ್ರಷ್ಟರರಾದ ಋಷಿಗಳ ಹಾಗೆ, ಸುಮಾರು ಇಪ್ಪತ್ತಕ್ಕೂ ಹೆಚ್ಚು ಸ್ತ್ರೀ–ಋಷಿಯರನ್ನೂ ಋಗ್ವೇದದಲ್ಲಿ ಕಾಣಬಹುದು. ಋಗ್ವೇದದ ಹತ್ತನೆಯ ಮಂಡಲದಲ್ಲಿ ಬರುವ ದೇವೀಸೂಕ್ತದ ರಚಯಿತ್ರಿಯಾದ 'ವಾಕ್' ಎಂಬ ಮಹಿಳೆ, ಅಂಭೃಣ ಋಷಿಯ ಮಗಳು. ಆಕೆ ಬ್ರಹ್ಮಾಂಡದ ಹಿಂದಿರುವ ಮಹತ್ ಶಕ್ತಿಯೊಂದಿಗೆ ತನ್ನ ಐಕ್ಯತೆಯ ಅನುಭವವನ್ನು **ಅಹಂ ರುದ್ರೇಭಿಃ ವಸುಭಿಶ್ಚರಾಮಿ...** ಎಂದು ಆರಂಭವಾಗುವ ದೇವೀಸೂಕ್ತದ ಮೂಲಕ ವ್ಯಕ್ತಪಡಿಸಿದ್ದಾಳೆ. ಸುಮಾರು ಐದಾರು ಸಾವಿರ ವರ್ಷಗಳ ಹಿಂದೆ ಕೂಡ ನಮ್ಮ ಮಹಿಳೆಯರು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಇಷ್ಟೊಂದು ಉನ್ನತಿ ಪಡೆದಿದ್ದರೆಂಬುದು ಬಹಳ ಹೆಮ್ಮೆಯ ವಿಷಯವೇ ಆಗಿದೆ.



ಇನ್ನು ಉಪನಿಷತ್ತುಗಳಲ್ಲಿ ಬರುವ ಬ್ರಹ್ಮವಾದಿನಿಯರ ಮಧ್ಯೆ ಗಾರ್ಗೀ, ಮೈತ್ರೇಯಿಯರ ಹೆಸರುಗಳಂತೂ ಸುಪ್ರಸಿದ್ಧವಾದುವು. ಜನಕರಾಜನ ಸಭೆಯಲ್ಲಿ ನೆರೆದಿದ್ದ ಶ್ರೇಷ್ಠ ತತ್ತ್ವಜ್ಞ ಪಂಡಿತರೆದುರು ಗಾರ್ಗಿಯು ಋಷಿಶ್ರೇಷ್ಠ ಯಾಜ್ಞವಲ್ಕ್ಯರೊಡನೆ ಬ್ರಹ್ಮಜ್ಞಾನದ ವಿಷಯವಾಗಿ ಧೈರ್ಯದಿಂದ ತರ್ಕ ಮಾಡಿ, ತೀಕ್ಷ್ಣ ಬಾಣಗಳಂತಿದ್ದ ತನ್ನ ಎರಡು ಪ್ರಶ್ನೆಗಳಿಂದ ಅವರನ್ನು ಪರೀಕ್ಷಿಸಿದಳು. ತದನಂತರವೇ ಯಾಜ್ಞವಲ್ಕ್ಯನನ್ನು ಸರ್ವಶ್ರೇಷ್ಠ ಬ್ರಹ್ಮಜ್ಞಾನಿ ಎಂದು ಘೋಷಿಸಿದಳು. ಯಾಜ್ಞವಲ್ಕ್ಯನು ಸಂನ್ಯಾಸಾಶ್ರಮವನ್ನು ಸ್ವೀಕರಿಸುವ ಸಂದರ್ಭದಲ್ಲಿ ತನ್ನ ಇಬ್ಬರು ಪತ್ನಿಯರಾದ ಕಾತ್ಯಾಯನಿ ಮತ್ತು ಮೈತ್ರೇಯಿಯರಿಗೆ ತನ್ನ ಸಂಪತ್ತನ್ನು ಹಂಚಿ ಹೊರಟುಹೋಗಬೇಕೆಂದು ನಿರ್ಧರಿಸಿದ್ದನು. ಆಗ ಮೈತ್ರೇಯಿಯು ಈ ಸಂಪತ್ತಿನಿಂದ ತನಗೆ ಆತ್ಮಜ್ಞಾನವು ಸಿಗುವುದೇ ಎಂದು ಪತಿಯನ್ನು ಪ್ರಶ್ನಿಸುತ್ತಾಳೆ. ಇದರಿಂದ ಆತ್ಮಜ್ಞಾನವು ಲಭಿಸದೆಂದು ತಿಳಿದ ನಂತರ ಮೈತ್ರೇಯಿಯು ಕೊಟ್ಟ ಉತ್ತರ ಇದು: **ಯೇನಾಹಂ ನಾಮೃತಾಸ್ಯಾಂ ಕಿಮಹಂ ತೇನ ಕುರ್ಯಾಮ್?** – "ಯಾವುದರಿಂದ ಅಮೃತತ್ವವು ದೊರಕುವುದಿಲ್ಲವೋ ಅದನ್ನು ಪಡೆದು ನಾನೇನು ಮಾಡಲಿ?" ಮೈತ್ರೇಯಿಯ ಈ ಉತ್ತರ ಇಂದಿಗೂ ಮನನೀಯವಾಗಿದೆ. ಭಾರತೀಯ ನಾರಿಯರು, ಗೃಹಿಣಿಯಾಗಲಿ ಅಥವಾ ಬ್ರಹ್ಮವಾದಿನಿಯರಾಗಲಿ, ಮನುಷ್ಯ ಜೀವನದ ಗುರಿ 'ಪರಮ ಸತ್ಯದ ಅನುಭೂತಿ' ಎಂದು ದೃಢವಾಗಿ ನಂಬಿದ್ದರು.

ಶ್ರೀಮಾತೆಯವರ ವ್ಯಕ್ತಿತ್ವದಲ್ಲಿ ಪುರಾತನ ಹಾಗೂ ಆಧುನಿಕ ಮೌಲ್ಯಗಳ ಸುಮಧುರ ಸಂಗಮವನ್ನು ನಾವು ಕಾಣಬಹುದು. ಇದೇ ಆಧುನಿಕ ಮಹಿಳೆಯ ಆದರ್ಶವಾಗಬೇಕು ಕೂಡ. ಈ ಅಂಶವನ್ನು ಸವಿಸ್ತಾರವಾಗಿ, ಶ್ರೀಮಾತೆಯವರ ಜೀವನದ ಹಲವು ರೋಚಕ ಘಟನೆಗಳ ಮೂಲಕ ವಿವರಿಸಿ ಹೇಳಿರುವ ಪರಮಪೂಜ್ಯ ಮಾತಾಜಿಯವರು ಶಾರದಾಮಠದ ಪ್ರಧಾನ ಕಾರ್ಯದರ್ಶಿಗಳು. ಮೂಲತಃ ಕನ್ನಡದವರೇ ಆದ ಮಾತಾಜಿಯವರು ಶ್ರೇಷ್ಠ ವಿದ್ವಾಂಸರು, ಉತ್ತಮ ವಾಗ್ಮಿಗಳು ಮತ್ತು ಆಡಳಿತಗಾರರು.



ಇನ್ನು ವೈದಿಕಯುಗದ ನಂತರ ಬಂದ ಪೌರಾಣಿಕ ಮತ್ತು ಮಹಾಕಾವ್ಯಗಳ ಕಾಲದಲ್ಲೂ ಅಸಂಖ್ಯ ಶ್ರೇಷ್ಠ ನಾರಿಯರಿದ್ದರು. ಸೀತೆ, ಸಾವಿತ್ರಿ, ಗಾಂಧಾರಿ, ಕುಂತಿ, ದ್ರೌಪದಿ ಮೊದಲಾದವರು ಇಂದಿಗೂ ಪ್ರಾತಃಸ್ಮರಣೀಯರು. ಅನಂತರ ಬಂದ ಬೌದ್ಧಧರ್ಮದಲ್ಲೂ, ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರಿದು ಅಪಾರ ಜ್ಞಾನಸಂಪನ್ನರಾದ ಭಿಕ್ಷುಣಿಯರಲ್ಲಿ ವಜೀರಾ, ಶುಕಾ ಪ್ರಮುಖರು. ಜೈನಧರ್ಮದಲ್ಲೂ ಶ್ರೇಷ್ಠ ನಾರಿಯರ ಅಭಾವವಿರಲಿಲ್ಲ. ಚಂದನಾ ಎಂಬ ಜೈನ ಸಾಧ್ವಿ ಸ್ತ್ರೀಯರ ಒಂದು ದೊಡ್ಡ ಸಂಘದ ಅಧ್ಯಕ್ಷಿಣಿಯಾಗಿದ್ದಳು.

ಸ್ಮೃತಿಗಳ ಕಾಲದಿಂದ ಸಮಾಜದಲ್ಲಿ ಸ್ತ್ರೀಯರ ಸ್ಥಿತಿಗತಿ, ಸ್ಥಾನಮಾನಗಳಲ್ಲಿ ಅಧೋಗತಿ ಪ್ರಾರಂಭವಾಗತೊಡಗಿತು. ವಿದ್ಯಾಭ್ಯಾಸದ ಕೊರತೆ, ಜಾತಿ–ಧರ್ಮಗಳ ಕಟ್ಟುನಿಟ್ಟಿನ ವ್ಯವಸ್ಥೆ ಹಾಗೂ ಸಮಾಜದ ವಿಧಿನಿಷೇಧಗಳ ಜೊತೆಗೆ, ಸಮಾಜದ ಇನ್ನಿತರ ಕ್ಷೇತ್ರಗಳಲ್ಲೂ ಸ್ತ್ರೀಯರು ಸ್ವಾತಂತ್ರ್ಯವನ್ನು ಕಳೆದುಕೊಂಡರು. ವಿದೇಶಿ ಆಕ್ರಮಣದಿಂದ ಬಾಲ್ಯವಿವಾಹ, ಸತಿಸಹಗಮನ, ಪರ್ದಾ ಪದ್ಧತಿಯಂತಹ ಘೋರ ಆಚರಣೆಗಳು ಪ್ರಾರಂಭವಾದವು. ಕ್ರಮೇಣ ನಾರಿಯರು ನಾಲ್ಕು ಗೋಡೆಗಳ ಮಧ್ಯೆ ಬಂಧಿಯಾಗಿ ಅಜ್ಞಾನ ಮತ್ತು ಕುಸಂಸ್ಕಾರಕ್ಕೆ ಬಲಿಯಾದ್ದರಿಂದ ಕುಟುಂಬ ಹಾಗೂ ಸಮಾಜವು ಅತ್ಯಂತ ಬಲಹೀನವಾಗತೊಡಗಿತು. ಆಶ್ಚರ್ಯವೆಂದರೆ ಇಂತಹ ಶೋಚನೀಯ ದುರವಸ್ಥೆಯ ಸಾಮಾಜಿಕ ಪರಿಸ್ಥಿತಿಯಲ್ಲಿಯೂ ಭಾರತದ ಮಧ್ಯಯುಗದಲ್ಲಿ ಕೆಲವು ಶ್ರೇಷ್ಠಸಾಧಿಕೆಯರ ಆವಿರ್ಭಾವವಾದುದನ್ನು ನೋಡಬಹುದು. ಉದಾಹರಣೆಗೆ ಮೀರಾಬಾಯಿ, ಅಹಲ್ಯಾಬಾಯಿ, ಅಕ್ಕಮಹಾದೇವಿ, ಆಂಡಾಳ್, ಮುಕ್ತಾಬಾಯಿ, ಜನಾಬಾಯಿ, ರಾಣಿ ಭವಾನಿ ಮುಂತಾದವರು.

**ಶ್ರೀರಾಮಕೃಷ್ಣರು ಹುಟ್ಟಿದ ಮೇಲೆ ಸತ್ಯಯುಗ ಆರಂಭವಾಗಿದೆ. ಅವರ ಜೊತೆಯಲ್ಲಿ ಎಂತೆಂಥವರೆಲ್ಲ ಬಂದಿದ್ದಾರೆ! ನರೇಂದ್ರ ಸಪ್ತರ್ಷಿಗಳಲ್ಲಿ ಪ್ರಮುಖನಾದವನು. ಅಂತಹ ಮಹಾತ್ಮರು ಎಷ್ಟು ಜನ ತಾನೇ ಇರಲು ಸಾಧ್ಯ? ಹುಳಿಮಾವಿನ ಹಣ್ಣುಗಳು ಲೆಕ್ಕವಿಲ್ಲದಷ್ಟು ಸಿಕ್ಕುತ್ತವೆ. ಆದರೆ ಸಿಹಿಮಾವಿನಹಣ್ಣುಗಳು ಹಾಗೆ ಸಿಗಲು ಸಾಧ್ಯವೇ? ಎಷ್ಟೋ ಜನ ಹುಟ್ಟುತ್ತಾರೆ. ಆದರೆ ಅವತಾರಪುರುಷರೊಂದಿಗೆ ಅವರ ಉದ್ದೇಶವನ್ನು ಈಡೇರಿಸಲು ಬರುವವರು ಮಾತ್ರ ರತ್ನಗಳು.**

***–ಶ್ರೀಶಾರದಾದೇವಿ***

### ಲೀಲಾಸಹಾಯಕಿ

ಆಧುನಿಕ ಯುಗದ ಆರಂಭದಲ್ಲಂತೂ ಎಲ್ಲಾ ಸಾಮಾಜಿಕ ವಿಷಯಗಳಲ್ಲೂ ಸ್ತ್ರೀಯರ ಸ್ಥಾನಮಾನಗಳಲ್ಲಿ ಅವನತಿಯು ಕಟ್ಟಕಡೆಯ ಹಂತಕ್ಕೆ ತಲುಪಿತ್ತು. ಆದ್ದರಿಂದಲೇ ನವಜಾಗರಣ ಕಾಲದ ಆರಂಭದಲ್ಲಿ ಹುಟ್ಟಿಬಂದ ಸಮಾಜಸುಧಾರಕರಾದ ರಾಜಾ ರಾಮಮೋಹನ ರಾಯ್, ಈಶ್ವರಚಂದ್ರ ವಿದ್ಯಾಸಾಗರ, ದಯಾನಂದ ಸರಸ್ವತಿ ಮೊದಲಾದವರು ಸ್ತ್ರೀಯರ ಸ್ಥಿತಿಗತಿಗಳಲ್ಲಿ ಸುಧಾರಣೆಗಳನ್ನು ತರಲು ಬಹುವಾಗಿ ಶ್ರಮಿಸಿದರು. ಸಮಾಜದ ಕಟ್ಟಳೆಗಳನ್ನು ಮೀರಿ ಸ್ತ್ರೀಶಿಕ್ಷಣಕ್ಕೆ ಪ್ರೋತ್ಸಾಹ, ಬಾಲ್ಯವಿವಾಹ ಮತ್ತು ಸತಿಸಹಗಮನಗಳಿಗೆ ವಿರೋಧ ವ್ಯಕ್ತಪಡಿಸಿದರು; ವಿಧವಾವಿವಾಹ ಮುಂತಾದುವನ್ನು ಸಮಾಜದಲ್ಲಿ ಜಾರಿಗೆ ತರಲು ಪ್ರಯತ್ನಿಸಿದರು.

ಈ ನವಜಾಗರಣದ ಪರಿಪೂರ್ಣತೆಯ ಸಾಕಾರಮೂರ್ತಿಯಂತೆ ಇದ್ದ ಶ್ರೀರಾಮಕೃಷ್ಣರು ಭಾರತೀಯ ನಾರಿಯರ ಉದ್ಧಾರಕ್ಕೆ ನೀಡಿದ ಕೊಡುಗೆ ಏನೆಂಬುದನ್ನು ಈಗ ನೋಡೋಣ. ಶ್ರೀರಾಮಕೃಷ್ಣರು ತತ್ತ್ವೋಪದೇಶಗಳನ್ನು ಒಳಗೊಂಡ ಗ್ರಂಥಗಳನ್ನು ರಚಿಸಲಿಲ್ಲ, ಯಾವ ವಿಧಿನಿಯಮಗಳನ್ನೂ ಜಾರಿಗೆ ತರುವುದಕ್ಕೆ ಒತ್ತಾಯಿಸಲಿಲ್ಲ. ಇಂಥ ವಿಷಯಗಳನ್ನು ಕುರಿತು ಸ್ಫೂರ್ತಿಯುತವಾದ ಉಪನ್ಯಾಸಗಳನ್ನೇನೂ ಮಾಡಲಿಲ್ಲ. ಆದರೆ ಮಾತೃಶಕ್ತಿಯನ್ನು ಜಾಗೃತಗೊಳಿಸುವುದಕ್ಕಾಗಿ ಅವರು ನಡೆಸಿದ ಸಾಧನೆಗಳು ಧಾರ್ಮಿಕ ಇತಿಹಾಸದಲ್ಲೇ ಅತ್ಯಂತ ಶ್ರೇಷ್ಠವಾದುವು.

ಅವರು ಭಕ್ತಿಯಿಂದ ಆರಾಧಿಸಿ ಒಲಿಸಿಕೊಂಡಿದ್ದು ಮಾತೃಮೂರ್ತಿಯಾದ ಜಗಜ್ಜನನಿ ಕಾಳೀಮಾತೆಯನ್ನು. ಸಾಧನೆಗಾಗಿ ಆರಿಸಿಕೊಂಡಿದ್ದ ಸ್ಥಳವಾದರೋ ಇದೀಗ 'ರಾಣಿ ರಾಸಮಣಿಯ ಕಾಳಿ ಮಂದಿರ' ಎಂದು ಜಗದ್ವಿಖ್ಯಾತವಾದ, ಮಹಿಳೆಯೋರ್ವಳಿಂದ ನಿರ್ಮಿಸಲ್ಪಟ್ಟ ದೇವಮಂದಿರ. ಅನಂತರ ಯುಗಾವತಾರರಾದ ಅವರು ಒಬ್ಬ ನಾರಿಯನ್ನು ಗುರುವಾಗಿ ಸ್ವೀಕರಿಸಿ, ಆಕೆಯ ಮಾರ್ಗದರ್ಶನದಲ್ಲಿ ತಂತ್ರಸಾಧನೆ ಮತ್ತು ವೈಷ್ಣವ ಸಾಧನೆಗಳನ್ನು ಮಾಡಿ ಸಿದ್ಧಿಯನ್ನು ಗಳಿಸಿಕೊಂಡರು. ಶ್ರೀರಾಮಕೃಷ್ಣರ ಸ್ತ್ರೀಗುರುವಾದ ಈ ಭೈರವಿ ಬ್ರಾಹ್ಮಣಿಯು ಹುಚ್ಚರೆಂದು ಕರೆಯಲ್ಪಡುತ್ತಿದ್ದ ಶ್ರೀರಾಮಕೃಷ್ಣರ ಉನ್ನತ ಆಧ್ಯಾತ್ಮಿಕ ಅವಸ್ಥೆಗಳನ್ನು ಅರ್ಥಮಾಡಿಕೊಂಡಳು; ಒಂದು ಪಂಡಿತರ ಸಭೆಯನ್ನು ಕರೆದು, ಅಲ್ಲಿ ಅವರನ್ನು 'ಅವತಾರಪುರುಷ' ರೆಂದು ಸಮರ್ಥಿಸಿಕೊಂಡು, ಅದನ್ನು